# ಅಸಹಿಷ್ಣುತೆ: ಹಿಂಸೆ ಹೆರುವ ಬಸಿರು

ಜಗತ್ತಿಗೆ ಅಹಿಂಸೆಯನ್ನು ಬೋಧಿಸಿದ ಬುದ್ಧನ ನಾಡು ಭಾರತ. ಅಹಿಂಸೆಯ ವಕ್ತಾರನಾಗಿ ಅಹಿಂಸೆಯ ಮೂಲಕವೇ ದೇಶಕ್ಕೆ ಸ್ವಾತಂತ್ರ್ಯವನ್ನು ತಂದುಕೊಟ್ಟ ಗಾಂಧಿ ಹುಟ್ಟಿದ್ದು ಇಲ್ಲಿಯೆ. ಆದರೆ ಈ ನಾಡಿಗರು ಯಾಕೆ ಅಸಹನೆಯನ್ನೆ ಉಸಿರಾಡುವಂತಾಗಿದೆ? ಅಂದರೆ ಅವರ ತತ್ವಗಳನ್ನು ಬೆಂಬಲಿಸುವವರು ಈಗ ದುರ್ಬಲರಾಗಿದ್ದಾರೆ ಎಂದೇ ಅರ್ಥ. ಅಸಹಿಷ್ಣುತೆ ಈಗ ದೇಶದ ಒಳಹೊರಗೆ ಸರ್ವವ್ಯಾಪಿಯಾಗಿ ಚರ್ಚಿಸಲ್ಪಡುತ್ತಿರುವ ವಿಷಯ. ಧಾರ್ಮಿಕ ಅಸಹಿಷ್ಣುತೆಗೆ ಒತ್ತು ಹೆಚ್ಚು.

ಕೋಮುವಾದ ಮತ್ತು ಜಾತಿವಾದ ಈ ದೇಶವನ್ನು ಕಿತ್ತು ತಿನ್ನುತ್ತಿರುವ ಎರಡು ಬೃಹತ್ ಸಮಸ್ಯೆಗಳು. ಮಾವೋವಾದವೂ ಕೆಲವು ರಾಜ್ಯಗಳಲ್ಲಿ ಚದುರಿದಂತೆ ಸವಾಲುಗಳನ್ನು ಒಡ್ಡುತ್ತಿರುವುದು ನಿಜ. ಆದರೆ ಅವರ ಸಂಘರ್ಷ ಬೌದ್ಧಿಕ ನೆಲೆಯನ್ನು ಆಶ್ರಯಿಸುವುದರಿಂದ ಹೋರಾಟಕ್ಕೆ ಒಂದು ತರ್ಕವಿದೆ. ತರ್ಕದ ಮೂಲಕ ಸಮಾಗಮಿಸುವುದು ಸುಲಭ. ಆದರೆ ಮಿಕ್ಕೆರಡು ವಾದಗಳು ಭಾವದ ನೆಲೆಯನ್ನು ಆಶ್ರಯಿಸಿರುವುದರಿಂದ ಸಂಧಿ ಸಮಾಗಮಕ್ಕೆ ಅವಕಾಶವೇ ಇಲ್ಲ. ಭಾವನೆಗೆ ಒಂದು ಅಳತೆಗೋಲೆಂಬುದು ಇಲ್ಲ, ತರ್ಕಕ್ಕೆ ಒಗ್ಗದು. ಭಾವನೆಗೆ ದಕ್ಕೆ ತರುವುದು ಎಂದರೆ ಏನು? ಅದನ್ನು ಎಲ್ಲಿಯವರೆಗೆ ಎಳೆದೊಯ್ಯಬಹುದು ಎಂದರೆ; ಗ್ರಾಮ ಸಮಾಜದಲ್ಲಿ ಬಹುಸಂಖ್ಯಾತರಾದ ಮೇಲ್ಜಾತಿ ಜನರು ಕೆಲವರನ್ನು ಮುಟ್ಟಿಸಿಕೊಳ್ಳದಿರುವುದು, ಜೀತ ಮಾಡಿಸುವುದು, ಊರಹೊರಗಿರಿಸುವುದು, ಕೆಲವೆಡೆ ಮಲ ಹೊರಿಸುವುದು ಎಲ್ಲವೂ (ಇವುಗಳನ್ನು ತಡೆಯುವುದು ಮೇಲ್ಜಾತಿಗಳ ಭಾವನೆಗೆ ಧಕ್ಕೆ ತರುವುದರಿಂದ) ಸಮರ್ಥನೀಯವೆನಿಸಿಬಿಡುತ್ತದೆ. ಅಲ್ಲಿ ಸಮಾನತೆ, ಮಾನವೀಯತೆ ಇತ್ಯಾದಿ ಪದಗಳು ಮಣ್ಣುಮುಕ್ಕುತ್ತವೆ.

ಕೋಮುವಾದ ಅತಿ ಸೂಕ್ಷ್ಮವಾದದ್ದು. ಆಡಳಿತಕ್ಕೆ ಅದು ಹಗ್ಗದ ಮೇಲಿನ ನಡಿಗೆ. ಸ್ವಲ್ಪ ಆಯ ತಪ್ಪಿದರೂ ಸಾರ್ವಜನಿಕ ಶಾಂತಿಗೆ ಭಂಗ. ಎರಡು ಕೋಮಿನ ಇಬ್ಬರು ವ್ಯಕ್ತಿಗಳು ಪರಸ್ಪರ ಸಂಧಿಸುವುದು, ವ್ಯವಹರಿಸುವುದು, ಸ್ನೇಹದಿಂದಿರುವುದು ಅಪಾಯಕಾರಿ ಎಂದು ತಿಳಿಯುವುದು ಮಾನವೀಯತೆಯ ಲಕ್ಷಣವಲ್ಲ. ಅದರಲ್ಲೂ ಎರಡು ಕೋಮಿನ ಇಬ್ಬರು ವಿರುದ್ಧ ಲಿಂಗಿಗಳು ಒಟ್ಟಿಗೆ ಸೇರುವುದು, ಮಾತಾಡುವುದು ಲೈಂಗಿಕ ಸಂಬಂಧಿತವೇ ಎಂದು ತೀರ್ಮಾನಿಸಿಬಿಡುವ ಅತಿರೇಕದ ವರ್ತನೆಯಂತೂ ಅಕ್ಷಮ್ಯ. ದಾದ್ರಿಯಲ್ಲಿ ಗೋಮಾಂಸ ಸೇವಿಸಿದನೆಂಬ ಸಂಶಯದ ಮೇಲೆ ಮಹಮದ್ ಅಕ್ಲಾಕ್‌ನನ್ನು ಕೊಂದದ್ದು ಅತ್ಯಂತ ಹೇಯವಾದ ಕೃತ್ಯ. ಅದನ್ನು ಇತರರಂತೆಯೆ ಅಸಹಿಷ್ಣುತೆ ಎಂದು ಹೇಳಿದ ನಟ ಶಾರುಕ್ ಖಾನ್ ಪಾಕಿಸ್ತಾನಕ್ಕೆ ಹೋಗಬೇಕೆಂದು ಹೇಳುವುದು ಅಷ್ಟೇ ಹೇಯವಾದದ್ದು. ಅಸ್ಪೃಶ್ಯತೆಯ ಕಾರಣಕ್ಕಾಗಿ ಅಂಬೇಡ್ಕರ್ ಗಾಂಧಿಯೊಂದಿಗೆ ನಡೆದ ಸಂವಾದದಲ್ಲಿ ನನಗೆ ಸ್ವದೇಶವೆಂಬುದಿಲ್ಲ (**I have no homeland**) ಎಂದು ಹೇಳಿದ್ದರು. ಭಾರತ ಯಾರಿಗೆ ಸ್ವದೇಶ ಎಂದು ಈಗ ಹೇಳುವುದೇ ಕಷ್ಟವಾಗಿದೆ. ಪರರ ಅಡುಗೆ ಮನೆಗೆ ನಮ್ಮ ಭಾವನೆ ಏಕೆ ಪ್ರವೇಶಿಸಬೇಕು ಎಂಬುದೇ ಅರ್ಥವಾಗದಾಗಿದೆ.

ಜಾತಿವಾದವಂತೂ ಅಸಹಿಷ್ಣುತೆಯ ಹೂರಣವಾಗಿದೆ. ಅದರ ಪ್ರವೃತ್ತಿಯೆ ಸಮಾಜದ ಲಂಬರೇಖಾತ್ಮಕ ವಿಭಜನೆ ಮತ್ತು ಆ ಪ್ರಕಾರ ಅಸಮಾನತೆಯ ಪೋಷಣೆ. ಅದರಿಂದ ಉಂಟಾಗುವ ಅಸಹಿಷ್ಣುತೆಯನ್ನು ಭಾರತ ಗರ್ಭೀಕರಿಸಿಕೊಂಡಿದೆ. ಅದು ಹೆರುವುದು ಹಿಂಸೆಯನ್ನೆ. ದೇವಸ್ಥಾನದ ಯಾವ ಜಾಗದಲ್ಲಿ, ಯಾರು, ಎಷ್ಟು ಅಂತರದಲ್ಲಿ ನಿಲ್ಲಬೇಕು, ಯಾರು ಯಾರಿಗೆ ಕ್ಷೌರ ಮಾಡಬೇಕು, ಯಾರು ಯಾವ ಬಾವಿಯಲ್ಲಿ ನೀರು ಸೇದಬೇಕು ಎಂಬುದು ಧಾರ್ಮಿಕ ಕಟ್ಟಳೆಯೆ ಆಗಿರುವುದರಿಂದ ಆ ತಾರತಮ್ಯಗಳು ಪ್ರಶ್ನಿಸದೆ ಉಳಿದಿದ್ದವು. ಅನಕ್ಷರಸ್ಥ ವಂಚಿತರ ಸಂಯಮವನ್ನೆ ಸಮ್ಮತಿಯೆಂದು ನಂಬಿ ನಮ್ಮದು ಜಗತ್ತಿನಲ್ಲಿಯೆ ಶ್ರೇಷ್ಠ ಸಂಸ್ಕೃತಿ, ಜನರು ಸಂತೋಷದಿಂದಿದ್ದರು ಎಂದು ನಂಬೋಣವಾಗಿತ್ತು. ಹಾಗೆಂದು ಸ್ವತಃ ಗಾಂಧಿಯವರೆ 'ಹಿಂದ್ ಸ್ವರಾಜ್' ಪುಸ್ತಕದಲ್ಲಿ ಕೆಲವು ಪಾಶ್ಚಾತ್ಯರ ಹೇಳಿಕೆಗಳನ್ನು ಉದಾಹರಿಸಿ ಸಮರ್ಥಿಸುತ್ತಾರೆ. ಈಗ ಅಕ್ಷರ ಕಲಿತ ಅವಮಾನಿತರು ಪ್ರಶ್ನಿಸುತ್ತಿದ್ದಾರೆ. ಉತ್ತರಿಸಲು ಅವರಿಲ್ಲ.

ಇವತ್ತಿಗೂ ಈ ದೇಶದಲ್ಲಿ ಜಾತಿವಾದದ ನೆಲೆಯಲ್ಲಿ ನಡೆಯುತ್ತಿರುವ ಘಟನೆಗಳನ್ನು ನೆನೆಸಿಕೊಂಡರೆ ನಡುಕ ಹುಟ್ಟುತ್ತದೆ. ತಮಿಳುನಾಡಿನ ಒಂದೂರಿನಲ್ಲಿ ದಲಿತನೊಬ್ಬ ಮೇಲ್ಜಾತಿಯ ಓಣಿಯಲ್ಲಿ ನಡೆದು ಹೋಗುತ್ತಿರುವಾಗ ಧೋತಿಯನ್ನು ಮೊಣಕಾಲಿನ ಮೇಲೆ ಎತ್ತಿ ಕಟ್ಟಿದ್ದನೆಂಬ ಕಾರಣಕ್ಕೆ ಹಿಡಿದು ಥಳಿಸಿದ್ದಾರೆ. ಇನ್ನೊಂದು ಸುದ್ದಿ ನಾಗರಿಕತೆಯನ್ನು ನಾಚಿಸುವಂತಿದೆ. ಕೋಲಾರ ಜಿಲ್ಲೆಯ ಮುಳಬಾಗಲು ತಾಲ್ಲೂಕಿನ ಕಗ್ಗನಹಳ್ಳಿಯ ಸರ್ಕಾರಿ ಶಾಲೆಯಲ್ಲಿ ಕಳೆದ ವರ್ಷ ಒಬ್ಬ ದಲಿತ ಮಹಿಳೆಯನ್ನು ಅಡುಗೆಯವಳನ್ನಾಗಿ ನೇಮಿಸಲಾಯಿತು. ಆಗ ಶಾಲೆಯಲ್ಲಿ 118 ಮಕ್ಕಳಿದ್ದರು. ಅಸ್ಪೃಶ್ಯ ಮಹಿಳೆಯು ಮಾಡಿದ ಅಡುಗೆಯನ್ನು ಮಕ್ಕಳು ತಿನ್ನಬಾರದೆಂದು ಅಲ್ಲಿನ ಮೇಲ್ಜಾತಿ ಪೋಷಕರು 100 ಮಕ್ಕಳನ್ನು ಶಾಲೆಯಿಂದ ಬಿಡಿಸಿದ್ದಾರೆ. ಉಳಿದ 18 ಮಕ್ಕಳಲ್ಲಿ ಐವರು ಮಾತ್ರ ಊಟ ಮಾಡುತ್ತಿದ್ದಾರೆ. ಅವರು ಆ ಮಹಿಳೆಯ ಜಾತಿಯವರೆ ಎಂಬುದನ್ನು ಹೇಳಬೇಕಾಗಿಲ್ಲ. ಮಿಕ್ಕ 13 ಮಕ್ಕಳು ಪರಿಶಿಷ್ಟ ವರ್ಗದವರು ಎನ್ನಲಾಗಿದೆ. ಅಂದರೆ ಅತ್ಯಂತ ಹಿಂದುಳಿದ ಜಾತಿಯವರೆ. ಆದರೆ ಮುಟ್ಟಿಸಿಕೊಳ್ಳಬಾರದ ಜಾತಿಯವಳು ಮಾಡಿದ ಅಡುಗೆಯನ್ನು ತಿನ್ನುವಹಾಗಿಲ್ಲ! ವಿಶ್ವಮಾನವರಾಗಿ ಹುಟ್ಟುವ ಮಕ್ಕಳನ್ನು ಜಾತಿವಾದಿಗಳನ್ನಾಗಿ ಪರಿವರ್ತಿಸುವ ಪರಿ ಇದು. ವಿದ್ಯೆಯಿಂದ ವಂಚಿತರಾದರೂ ಸರಿ ಜಾತಿನೀತಿಯು ಸಡಿಲಗೊಳ್ಳಬಾರದು ಎಂಬ ಧೋರಣೆಯುಳ್ಳ ಬರ್ಬರ ಸಮಾಜ ನಮ್ಮದು.

ದಲಿತರ ವಿರುದ್ಧ ನಡೆಯುವ ದೌರ್ಜನ್ಯಗಳ ವರದೀಕೃತ ಅಂಕಿಅಂಶಗಳು ಹೀಗಿವೆ. ದೇಶದಲ್ಲಿ ಪ್ರತಿದಿನವೂ 27 ಪ್ರಕರಣಗಳು ದಾಖಲಾಗುತ್ತವೆ. 13 ಜನರನ್ನು ಕೊಲ್ಲಲಾಗುತ್ತದೆ. 5 ಮನೆಗಳನ್ನು ಸುಡುತ್ತಾರೆ. 6 ಮಂದಿಯನ್ನು ಅಪಹರಿಸುತ್ತಾರೆ. 3 ಮಹಿಳೆಯರ ಮೇಲೆ ಅತ್ಯಾಚಾರವಾಗುತ್ತದೆ. ಪ್ರತಿ 18 ನಿಮಿಷಗಳಿಗೊಮ್ಮೆ ದಲಿತರ ವಿರುದ್ಧ ಒಂದು ಅಪರಾಧವೆಸಗಲಾಗುತ್ತದೆ. ಹಿಂದೂ ರಾಷ್ಟ್ರೀಯವಾದದ ಮಹಾತ್ವಾಕಾಂಕ್ಷಿಗಳು ಘರ್ ವಾಪಸಿಯಂಥ ಕಾರ್ಯಕ್ರಮದ ಮೂಲಕ ಬೆಸುಗೆಗೆ (**fusion**) ಪ್ರಯತ್ನಿಸುತ್ತಾರೆ, ಆದರೆ ಜಾತಿಸಂವಿಧಾನದ ಅಂತರ್ನಿಯಮಗಳಿಂದ ಅದು ತಂತಾನೆ ಒಡೆಯುತ್ತದೆ (**fission**). ಇವೆಲ್ಲದರ ನಡುವೆಯೂ ದೇಶದಲ್ಲಿ ಅಸ್ಪೃಶ್ಯತೆ ಇಲ್ಲ, ಅಸಹಿಷ್ಣುತೆ ಇಲ್ಲವೇ ಇಲ್ಲ ಎಂದು ಹೇಳುತ್ತಿರುವುದು ಶೋಚನೀಯವಾಗಿದೆ.

■ ಮೂಚಿ

## ಮಾತೇ ಮುತ್ತು

★ ದೇಶದ ಸಂಸ್ಕೃತಿ ದೇಶದ ಜನರ ಹೃದಯ ಮತ್ತು ಆತ್ಮಗಳಲ್ಲಿದೆ.

-ಮಹಾತ್ಮ ಗಾಂಧಿ

★ ಮೌನ ನಿಜವಾದ ಗೆಳೆಯ. ಅದು ಯಾವತ್ತೂ ದ್ರೋಹ ಮಾಡುವುದಿಲ್ಲ.

-ಕನ್‌ಫ್ಯೂಶಿಯಸ್

★ ಈ ಜಗತ್ತು ತುಂಬಾ ಅಪಾಯಕಾರಿ. ಜನರು ಕೆಟ್ಟವರೆಂದಲ್ಲ; ಆದರೆ ಇಲ್ಲಿ ಜನರು ಏನೂ ಮಾಡುತ್ತಿಲ್ಲ ಎನ್ನುವುದರಿಂದಾಗಿ.

_ಆಲ್ಬರ್ಟ್ ಐನ್‌ಸ್ಟೀನ್

★ ಇತರರನ್ನು ಗೆಲ್ಲುವವನು ಬಲಶಾಲಿ. ತನ್ನನ್ನು ತಾನು ಗೆಲ್ಲುವವನು ದೈತ್ಯ.

-ಲಾವೊ ತ್ಸು

★ ನಾನು ನಿಧಾನಕ್ಕೆ ನಡೆಯುವವನು. ಆದರೆ ನಾನು ಯಾವತ್ತೂ ಹಿಂದಕ್ಕೆ ನಡೆಯುವವನಲ್ಲ.

-ಅಬ್ರಹಾಂ ಲಿಂಕನ್

★ ಪ್ರೇಮ ಕುರುಡು. ಆದರೆ ಗೆಳೆತನ ಕಣ್ಣು ಮುಚ್ಚಿರುತ್ತದೆ.

-ಫ್ರೆಡ್ರಿಕ್ ನೀಟ್ಶೆ

★ ಕಣ್ಣು ತೆರೆಯಿರಿ. ನಿಮ್ಮೊಳಗೇ ಇಣುಕಿ ನೋಡಿ. ನೀವು ನಡೆಸುತ್ತಿರುವ ಜೀವನ ನಿಜಕ್ಕೂ ತೃಪ್ತಿಕರವಾಗಿದೆಯೆ?

-ಬಾಬ್ ಮಾರ್ಲೇ

★ ಮನಸ್ಸು ಮತ್ತು ಸ್ಫೂರ್ತಿಯ ವಿಸ್ತರಣೆಯೇ ಸಂಸ್ಕೃತಿ.

-ಜವಾಹರಲಾಲ್ ನೆಹ್ರೂ

★ ಗಂಟಲು ದೊಡ್ಡದಾದಷ್ಟೂ ಬುದ್ಧಿವಂತಿಕೆ ಸಣ್ಣದಾಗುತ್ತದೆ.

-ಅರ್ನೆಸ್ಟ್ ನ್ಯೂಮನ್